**Spl.C. 5005/2019**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ 1**

**ಪಿ ಡಬ್ಲೂಃ 2**

| | |
|---|---|
| ಸಾಕ್ಷಿಯ ಹೆಸರು - | ನಾಗಪ್ಪ |
| ತಂದೆಯ ಹೆಸರು - | ಹನುಮಕ್ಕ |
| ವಯಸ್ಸು - | 40 ವರ್ಷ |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಶ್ರೀಕಂಠಪುರ |

**ಸಾಕ್ಷಿಯನ್ನು ದಿನಾಂಕಃ 20-02-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

**2014** ರಲ್ಲಿ ದೇವದಾಸಿ ಯೋಜನೆಯಲ್ಲಿ ನನ್ನ ತಾಯಿಗೆ ಸಬ್ಸಿಡಿ ಸಮೇತ ರೂ. **20,000/-** ಸಹಾಯಧನ ಮಂಜೂರಾಗಿತ್ತು. ಈ ಸಂಬಂಧ ಇಲಾಖೆಯಿಂದ ಕೆಲವು ವ್ಯಕ್ತಿಗಳು ಬಂದಿದ್ದಾರೆ ರೂ. **1,500/-** ಹಣ ಕೇಳುತ್ತಿದ್ದಾರೆ ಎಂದು ನನ್ನ ಅಣ್ಣ ನನಗೆ ಪೋನ್ ಮಾಡಿದ್ದರು. ನಾನು ಅಣ್ಣನಿಂದ ಪೋನ್ ನಂಬರ್ ಪಡೆದು ಮಾತನಾಡಿದೆ. ಪೋನ್ ಮಾಡಿದಾಗ ಪರಶುರಾಮ ಎಂಬಾತ ತಾನು ಯೋಜನಾಧಿಕಾರಿ ಎಂದು ಪರಿಚಯಿಸಿಕೊಂಡು ತಾನೇ ಲೋನ್ ಮಾಡಿಸಿಕೊಟ್ಟಿದ್ದು ರೂ. **1,000/-** ಹಣ ಕೊಡುವಂತೆ ಕೇಳಿದ್ದ. ಆ ಸಂಭಾಷಣೆಯನ್ನು ನಾನು ಧ್ವನಿ ಮುದ್ರಣ ಮಾಡಿಕೊಂಡಿದ್ದೆ. ನನಗೆ ಲಂಚ ಕೊಡಲು ಇಷ್ಟವಿರಲಿಲ್ಲ. ಹೀಗಾಗಿ ನಾನು ದಾವಣಗೆರೆ ಲೋಕಾಯುಕ್ತ ಕಚೇರಿಗೆ ಹೋಗಿ ದೂರು ನೀಡಿದ್ದೆ. ಅದನ್ನು ಈಗ ನೋಡುತ್ತಿದ್ದು ನಿಪಿಃ **55** ಎಂದು, ಸಹಿಯನ್ನು ನಿಪಿಃ **55** (ಎ) ಎಂದು ಗುರುತಿಸಲಾಯಿತು.

ಆ ಕಾಲದಲ್ಲಿ ಧ್ವನಿ ಮುದ್ರಣವನ್ನು ಅವರಿಗೆ ಒದಗಿಸಿದ್ದೆ. ಪೋಲಿಸರ ಸೂಚನೆ ಮೇರೆಗೆ ಆರೋಪಿಗೆ ಪೋನ್ ಮಾಡಲಾಗಿ ಆತ ಮಾರನೇಯ ದಿನ ಹರಪನಹಳ್ಳಿಗೆ ಬರುವಂತೆ ತಿಳಿಸಿದ್ದ. ಪೋಲಿಸರು ಕೇಸ್ ದಾಖಲಿಸಿ ಮಂಜುನಾಥ ಹಾಗೂ ಮತ್ತೊಬ್ಬ ವ್ಯಕ್ತಿಯನ್ನು ಠಾಣೆಗೆ ಕರೆಯಿಸಿ ಅವರಿಗೆ ಪ್ರಕರಣವನ್ನು ವಿವರಿಸಿ ನನ್ನಿಂದ ರೂ. **1,000/-** ಹಣವನ್ನು

ಪಡೆದುಕೊಂಡರು ಅದು ರೂ. 100/- ಯ 10 ನೋಟುಗಳು ಆಗಿದ್ದವು. ನಂತರ ಪೋಲಿಸರು ಸದರಿ ನೋಟಿನ ನಂಬರ್ ಗಳನ್ನು ದಾಖಲಿಸಿದರು. ಅದನ್ನು ಈಗ ನೋಡುತ್ತಿದ್ದು, ನಿಪಿಃ 1 ಆಗಿರುತ್ತದೆ. ನಂತರ ಸದರಿ ನೋಟಿನ ಮೇಲೆ ರಾಸಾಯನಿಕವನ್ನು ಸಿಂಪಡಿಸಿ ಒಬ್ಬ ಪಂಚರ ಕೈಯಲ್ಲಿ ಎಣಿಸುವಂತೆ ಹೇಳಿ ಆತನ ಕೈಯನ್ನು ದ್ರಾವಣದಿಂದ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಪೋಲಿಸರು ಡೆಮೋ ಟ್ರಾಫ್ ಪ್ರಕ್ರಿಯೆಯನ್ನು ನನಗೆ ಹಾಗೂ ಪಂಚರಿಗೆ ವಿವರಿಸಿದರು. ನಂತರ ಪೌಡರ್ ಲೇಪಿತ ನೋಟುಗಳನ್ನು ಠಾಣೆಯಲ್ಲಿ ನನಗೆ ಹಸ್ತಾಂತರಿಸಿ ನನ್ನನ್ನು ಮತ್ತು ಪಂಚರನ್ನು ಇತರೆ ಸಿಬ್ಬಂದಿಗಳ ಸಮೇತ ಪೋಲಿಸ ವಾಹನದಲ್ಲಿ ಹರಪನಹಳ್ಳಿ ಬಸ್ ನಿಲ್ದಾಣದ ಹತ್ತಿರ ಕರೆ ತಂದರು. ಅಲ್ಲಿ ಪೋಲಿಸರ ಸೂಚನೆಯ ಮೇರೆಗೆ ಆರೋಪಿಗೆ ಪೋನ್ ಮಾಡಲಾಗಿ ಅಭಿರುಚಿ ಹೋಟೆಲ್ ಗೆ ಬರುವಂತೆ ಸೂಚಿಸಿದ. ಪೋಲಿಸರು ಮಂಜುನಾಥ ಎಂಬಾತನನ್ನು ನೆರಳು ಸಾಕ್ಷಿಯಾಗಿ ನೇಮಿಸಿ ನನ್ನೊಂದಿಗೆ ಹೋಗುವಂತೆ ಹೇಳಿದರು. ನಾವಿಬ್ಬರೂ ಹೋಟೆಲ್ ನ ಒಳಗಡೆ ಹೋದೆವು. ಆರೋಪಿ ಬಾಗಿಲ ಬಳಿ ನಿಂತಿದ್ದ. ನಂತರ ಒಳಗೆ ಟೀ ಕುಡಿಯಲು ಕುಳಿತಾಗ ಹಣ ತಂದಿದ್ದೀರಾ ಕೊಡಿ ಎಂದು ಕೇಳಿದ. ನಾನು ನನ್ನ ಶರ್ಟ ಜೇಬಿನಿಂದ ರೂ. 100/- ನ 10 ನೋಟುಗಳನ್ನು ಹೊರ ತೆಗೆದು ಆತನಿಗೆ ಕೊಟ್ಟೆ. ಆತ ಅದನ್ನು ಬಲಗೈಯಲ್ಲಿ ಪಡೆದು ಶರ್ಟನ ಎಡ ಜೇಬಿನಲ್ಲಿ ಇರಿಸಿಕೊಂಡ. ಠಾಣೆಯಲ್ಲಿ ಪೋಲಿಸರು ಆರೋಪಿ ಕೇಳಿದ್ದಲ್ಲಿ ಹಣ ನೀಡಿ, ಹಣ ನೀಡಿದ ನಂತರ ಕರ್ಚಿಪ್ ನಲ್ಲಿ ಮುಖ ಒರೆಸಿಕೊಂಡು ಸನ್ನೆ ಮಾಡುವಂತೆ ತಿಳಿಸಿದ್ದರು. ಅದರಂತೆ ಆರೋಪಿ ಹಣ ಪಡೆದ ನಂತರ ನಾನು ಕರವಸ್ತ್ರ ತೆಗೆದು ಮುಖ ಒರೆಸಿಕೊಂಡು ಸನ್ನೆ ಮಾಡಲಾಗಿ ಪೋಲಿಸರು ದಾಳಿ ಮಾಡಿ ಆರೋಪಿಯ ಕೈಗಳನ್ನು ಹಿಡಿದು ವಶಕ್ಕೆ ಪಡೆದರು. ನಂತರ ಆರೋಪಿಯ ಕಡೆಯಿಂದ ಹಣ ತೆಗೆಯುವಂತೆ ಹೇಳಿ ಅದನ್ನು ವಶಕ್ಕೆ ಪಡೆದು, ನಂತರ ಆತನನ್ನು ಜೀಪ್ ನಲ್ಲಿ ಮಹಿಳಾ ಕಲ್ಯಾಣ ಇಲಾಖೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಆತನ

**Spl.C. 5005/2019**

**ಸಿ ಡಬ್ಲೂಃ 1**

**ಪಿ ಡಬ್ಲೂಃ 2**

ಕೈ ತೊಳೆಸಿ ಪಂಚನಾಮೆಯನ್ನು ಜರುಗಿಸಿದರು. ಬಣ್ಣ ತಿರುಗಿದ ದ್ರಾವಣವನ್ನು ಹಾಗೂ ನೋಟುಗಳನ್ನು ಅಮಾನತ್ತು ಪಡಿಸಿಕೊಂಡರು.

ಸದರಿ ಪಂಚನಾಮೆ ಈಗ ನೋಡುತ್ತಿದ್ದು, ಅದನ್ನು ನಿಪಿಃ 2 ಎಂದು ಈಗಾಗಲೇ ಗುರುತಿಸಿದ್ದು, ಸಹಿಯನ್ನು ನಿಪಿಃ 2 (ಆಯ್) ಎಂದು ಗುರುತಿಸಲಾಯಿತು. ಆ ದಿನ ನನ್ನಿಂದ ಹಣ ಪಡೆದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತನೇ ಆಗಿದ್ದಾನೆ. ನಿಪಿಃ 3 ರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿಃ 3 (ಸಿ) ಎಂದು ಗುರುತಿಸಲಾಯಿತು. ಅದನ್ನು ಪೋಲಿಸರು ಠಾಣೆಯಲ್ಲಿ ಪಂಚನಾಮೆ ಜರುಗಿಸಿದ್ದಾಗ ಪಡೆದಿದ್ದರು. ನಂತರ ಆರೋಪಿತನನ್ನು ವಶಕ್ಕೆ ಪಡೆದು ದಾವಣಗೆರೆಗೆ ಕರೆದುಕೊಂಡು ಹೋದರು.

ಎಲ್ಲಾ ಪಂಚನಾಮೆ ಕಾಲದಲ್ಲೂ ಪೋಲಿಸರು ಪೋಟೋಗಳನ್ನು ತೆಗೆದಿದ್ದರು. ಅವುಗಳನ್ನು ಈಗಾಗಲೇ ನಿಪಿಃ 4 ರಿಂದ 54 ಎಂದು ಗುರುತಿಸಲಾಗಿದೆ. ನಾನು ಹಾಗೂ ಆರೋಪಿ, ಪಂಚ ಸಾಕ್ಷಿಗಳು ಸದರಿ ಪೋಟೋಗಳಲ್ಲಿ ಇದ್ದೇವೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ವಿ ಪಿ., ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಹಳೆಯ ಪ್ರಕರಣವಾದ ಹಿನ್ನೆಲೆಯಲ್ಲಿ ಸಕಾರಣವಿಲ್ಲವೆಂದು ಕಾಲಾವಕಾಶ ನಿರಾಕರಿಸಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.